



ಅರುಣ ಪಿ. ಭಟ್ಟ

## ವಾರಭವಿಷ್ಯ 1.7.2021ರಿಂದ 7.7.2021ರವರೆಗೆ




ನಿಮ್ಮ ಬೌದ್ಧಿಕ ಶಕ್ತಿಯಿಂದ ವಿಶೇಷ ಗೌರವಕ್ಕೆ ಪಾತ್ರರಾಗುತ್ತೀರಿ. ಸ್ಪರ್ಧೆ, ಕ್ರೀಡಾ ಕ್ಷೇತ್ರಗಳಲ್ಲಿ ಉತ್ತಮ ಸ್ಥಾನ ಮಾನ ಪಡೆಯಲಿದ್ದೀರಿ. ಮಕ್ಕಳು ಯಶಸ್ಸು ಪಡೆಯಲು ಪ್ರೋತ್ಸಾಹ ನೀಡಲಿದ್ದೀರಿ. ಹಣಕಾಸು ವಿಚಾರದಲ್ಲಿ ಪ್ರಗತಿ ಇದೆ. ಸಾಲ ಮರುಪಾವತಿಗೆ ಸಂಬಂಧಿಸಿದಂತೆ ಸಮಸ್ಯೆಗಳು ಎದುರಾಗಬಹುದು. ಪ್ರತಿಸ್ಪರ್ಧಿಗಳು ನಿಮ್ಮನ್ನು ಮಣಿಸಲು ಬಹಳ ಶ್ರಮಿಸುತ್ತಾರೆ. ಶುಭದಿನ 1. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.




ಜೀವನ ಮಟ್ಟ ಮೇಲಕ್ಕೆ ಏರಲಿದೆ. ಮನೆಗೆ ದುಬಾರಿ ವಿಲಾಸಿ ವಸ್ತುಗಳನ್ನು ಖರೀದಿಸುವ ಯೋಗ ಇದೆ. ಚೈತನ್ಯ, ದೈಹಿಕ ಕ್ಷಮತೆ ಹೆಚ್ಚಾಗಲಿದೆ. ದೈನಂದಿನ ಚಟುವಟಿಕೆಗಳನ್ನು ಇನ್ನಷ್ಟು ಉತ್ಸಾಹದಿಂದ ಮಾಡಲಿದ್ದೀರಿ. ವೈವಾಹಿಕ ಜೀವನದ ಕಡೆಗೆ ಹೆಚ್ಚು ಲಕ್ಷ್ಯ ನೀಡಿ. ಸಂಗಾತಿಯ ಅಗತ್ಯಗಳಿಗೆ ಸ್ಪಂದಿಸಿ. ಪ್ರೀತಿಪಾತ್ರರ ಜತೆಗಿನ ಬಾಂಧವ್ಯ ಗಟ್ಟಿಯಾಗಲಿದೆ. ಶುಭದಿನ 2. ಸೌಂದರ್ಯ ಲಹರಿ ಪಠಿಸಿರಿ.




ಉದ್ಯೋಗದಲ್ಲಿ ನಿಮ್ಮ ಹಿಡಿತ ಗಟ್ಟಿಯಾಗಲಿದೆ. ಆತ್ಮವಿಶ್ವಾಸ ಹೆಚ್ಚಾಗಲಿದೆ. ಈ ವಾರ ನಿಮ್ಮ ಪಾಲಿಗೆ ಅದೃಷ್ಟ ಕೈ ಹಿಡಿಯಲಿದೆ. ಉದ್ಯೋಗ ವ್ಯಾಪಾರದಲ್ಲಿ ನಿಮ್ಮ ಸ್ಥಿತಿ ಉತ್ತಮವಾಗಿರುತ್ತದೆ. ಕುಟುಂಬಕ್ಕೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡಲಿದ್ದೀರಿ. ಪೋಷಕರ ಸಂತೋಷಕ್ಕಾಗಿ ಅವರ ಅಗತ್ಯಗಳನ್ನು ಪೂರೈಸಲಿದ್ದೀರಿ. ಬೌದ್ಧಿಕ ಮಟ್ಟ ಉತ್ತಮವಾಗಿರುತ್ತದೆ. ಶುಭದಿನ 4. ಲಕ್ಷ್ಮೀನರಸಿಂಹ ಜಪ ಮಾಡಿರಿ.




ಆಸ್ತಿ ವ್ಯವಹಾರಗಳಲ್ಲಿ ಪ್ರಗತಿ ಕಾಣಿಸಿಕೊಳ್ಳಲಿದೆ. ಕಿರು ಪ್ರಯಾಣ ಕೈಗೊಳ್ಳುವ ಯೋಗ ಇದೆ. ವೃತ್ತಿ ಅಗತ್ಯಗಳಿಗೆ ಈ ಪ್ರಯಾಣ ಅನಿವಾರ್ಯ ಆಗಲಿದೆ. ನಿಮ್ಮ ಧೈರ್ಯ ಹೆಚ್ಚಾಗಲಿದೆ. ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೆಚ್ಚಾಗಲಿದೆ. ಸ್ಪರ್ಧಾತ್ಮಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಇರುವವರಿಗೆ ಕನಸಿನ ಗುರಿ ಮುಟ್ಟಲು ಸೂಕ್ತ ಅವಕಾಶ ದೊರೆಯಲಿದೆ. ಶುಭದಿನ 2. ವಿಷ್ಣು ಸಹಸ್ರನಾಮ ಪಠಿಸಿರಿ.




ಉದ್ಯೋಗದಲ್ಲಿ ಯಶಸ್ಸು ಪಡೆಯಲಿದ್ದೀರಿ. ಇತ್ತೀಚೆಗೆ ನೀವು ಅನುಭವಿಸಿದ ನಷ್ಟವನ್ನು ಮತ್ತೆ ಭರಿಸಲು ಎಲ್ಲ ಪ್ರಯತ್ನವನ್ನು ಮಾಡಲಿದ್ದೀರಿ. ಸಂಗಾತಿ ಹಾಗೂ ಮಕ್ಕಳ ಜತೆಗೆ ಉತ್ತಮ ಸಮಯ ಕಳೆಯಲಿದ್ದೀರಿ. ಸಮಾಜದಲ್ಲಿ ಉತ್ತಮ ಹೆಸರು, ಕೀರ್ತಿಯನ್ನು ಪಡೆಯಲಿದ್ದೀರಿ. ವಾರಾಂತ್ಯಕ್ಕೆ ಅಂದುಕೊಂಡಿದ್ದಕ್ಕಿಂತ ಸಕಾರಾತ್ಮಕ ಫಲಿತಾಂಶಗಳು ದೊರೆಯಲಿವೆ. ಶುಭದಿನ 6. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಪೋಷಕರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಆಸ್ತಿ ವ್ಯವಹಾರದಲ್ಲಿ ಪ್ರಗತಿ ಕಾಣಲಿದೆ. ಸ್ಥಿರವಾದ ಆರೋಗ್ಯ ಕಾಪಾಡಿಕೊಳ್ಳುವುದು ಸವಾಲಾಗಿ ಪರಿಣಮಿಸಲಿದೆ. ಕಾನೂನು ವ್ಯಾಜ್ಯಗಳು ನಡೆಯುತ್ತಿದ್ದಲ್ಲಿ ಪ್ರತಿಸ್ಪರ್ಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ಪ್ರೀತಿ ಪ್ರೇಮದಲ್ಲಿ ಇರುವವರು ಸಂಗಾತಿಯ ಸಿಟ್ಟನ್ನು ಸಹಿಸಬೇಕಾಗುತ್ತದೆ. ಶುಭದಿನ 1. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಹಣಕಾಸು ಲಾಭ ಗಳಿಸುವ ಯೋಗ ಇದೆ. ನಿಮ್ಮ ಜ್ಞಾನ ಹಾಗೂ ಬೌದ್ಧಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಸಹೋದ್ಯೋಗಿಗಳ ಜತೆ ಉತ್ತಮ ಬಾಂಧವ್ಯ ಇರಲಿದೆ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಕಾಣಲಿದ್ದೀರಿ. ಆದರೆ ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಖರ್ಚಿನ ಪ್ರಮಾಣ ಹೆಚ್ಚಾಗಲಿದೆ. ಶುಭದಿನ 2. ಚಂಡಿ ಪಾರಾಯಣ ಮಾಡಿರಿ.




ಉದ್ಯೋಗ ಸ್ಥಳದಲ್ಲಿ ನಿಮಗೆ ಅನುಕೂಲಕರವಾದ ಸನ್ನಿವೇಶ ಇರಲಿದೆ. ಸಹೋದ್ಯೋಗಿಗಳ ಬೆಂಬಲ ದೊರೆಯಲಿದೆ. ದೈಹಿಕ ಕ್ಷಮತೆ ಉತ್ತಮವಾಗಿರುತ್ತದೆ. ಈ ಹಿಂದಿನ ಆರೋಗ್ಯ ಸಮಸ್ಯೆಗಳು ಇದ್ದಲ್ಲಿ ನಿವಾರಣೆ ಆಗುತ್ತವೆ. ಸಮಾಜದಲ್ಲಿ ಪ್ರಭಾವಿಗಳಾಗಿ ಹೊರಹೊಮ್ಮಲಿದ್ದೀರಿ. ಸಂಗಾತಿ ಮಕ್ಕಳ ಮೇಲೆ ನಿಮ್ಮ ಅಕ್ಕರಾಸ್ಥೆ ಹೆಚ್ಚಾಗಲಿದೆ. ಶುಭದಿನ 4. ದತ್ತಗುರು ಚರಿತ್ರೆ ಪಠಿಸಿರಿ.




ಈ ಅವಧಿಯಲ್ಲಿ ಅದೃಷ್ಟ ನಿಮ್ಮ ಪಾಲಿಗೆ ಇರಲಿದೆ. ಸರ್ಕಾರಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಏಳ್ಗೆ ಇದೆ. ಆರೋಗ್ಯ ಉತ್ತಮವಾಗಿರುತ್ತದೆ. ಅನುಭವಿಗಳ ಮಾರ್ಗದರ್ಶನದಿಂದ ಹೊಸ ಕೌಶಲ, ತಂತ್ರಗಳನ್ನು ಕಲಿಯಲು ಸಾಧ್ಯವಾಗುತ್ತದೆ. ತಾತ್ಕಾಲಿಕ ಉದ್ಯೋಗ ಮಾಡುತ್ತಿರುವವರಿಗೆ ಕಾಯಂ ಆಗುವ ಯೋಗ ಇದೆ. ಶುಭದಿನ 6. ಲಲಿತಾ ಸಹಸ್ರನಾಮ ಪಠಿಸಿರಿ.




ಹೂಡಿಕೆ ವಿದೇಶ ವ್ಯವಹಾರಗಳು ಲಾಭದಾಯಕವಾಗಿ ಇರಲಿವೆ. ಕಾನೂನು ವ್ಯವಹಾರಗಳಲ್ಲಿ ನಿಮ್ಮ ಕೈ ಮೇಲಾಗಲಿದೆ. ಪ್ರತಿಸ್ಪರ್ಧಿಗಳು ನಿಮಗೆ ಸವಾಲೊಡ್ಡಬಹುದು. ಆದ್ದರಿಂದ ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ದೊಡ್ಡ ಸಂಸ್ಥೆಗಳ ಜತೆಗೆ ವೃತ್ತಿಪರ ಒಪ್ಪಂದಕ್ಕೆ ಬರುವ ಅವಕಾಶಗಳು ಇವೆ. ಮಕ್ಕಳ ಜತೆಗೆ ಸಂತೋಷವಾದ ಸಮಯ ಕಳೆಯಲಿದ್ದೀರಿ. ಶುಭದಿನ 5. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಸಂಗಾತಿ ಜತೆಗೆ ಸಂಬಂಧ ಗಾಢವಾಗಲಿದೆ. ಕೌಟುಂಬಿಕ ಜೀವನದಲ್ಲಿ ಕೊಟ್ಟ ಮಾತಿನಂತೆ ನಡೆದುಕೊಳ್ಳಲಿದ್ದೀರಿ. ಸಮಾಜದ ಪ್ರಮುಖರು ನಿಮ್ಮ ಕಠಿಣ ಪರಿಶ್ರಮವನ್ನು ಗುರುತಿಸಲಿದ್ದಾರೆ. ಮುಖ್ಯ ಹುದ್ದೆಯಲ್ಲಿ ಇರುವವರಿಗೆ ಹಿಡಿತ ಗಟ್ಟಿ ಮಾಡಿಕೊಳ್ಳಲು ಅವಕಾಶ ದೊರೆಯಲಿದೆ. ಮಕ್ಕಳ ನಿರ್ಧಾರದಂತೆ ನಡೆದುಕೊಳ್ಳಲು ಹೆಚ್ಚಿನ ಸಮಯ ಮೀಸಲಿಡಲಿದ್ದೀರಿ. ಶುಭದಿನ 1. ಲಕ್ಷ್ಮಿ ಕನಕಧಾರಾ ಸ್ತೋತ್ರ ಪಠಿಸಿರಿ.




ಸೋದರ ಸಂಬಂಧಿಗಳ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ವೃತ್ತಿಪರ ಕಾರಣಗಳಿಗಾಗಿ ಪ್ರಯಾಣಗಳನ್ನು ಮಾಡಬೇಕಾಗುತ್ತದೆ. ಅನಗತ್ಯವಾದ ತಡೆಗಳನ್ನು ಒಡ್ಡುವ ಪ್ರತಿಸ್ಪರ್ಧಿಗಳು, ನಿಮ್ಮ ಪ್ರಗತಿಗೆ ಅಡ್ಡಗಾಲು ಹಾಕುತ್ತಾರೆ. ಸ್ಥಿರವಾದ ಆರೋಗ್ಯ ಹಾಗೂ ದೃಢತೆ ಕಾಯ್ದುಕೊಳ್ಳುವುದು ಸವಾಲಾಗಿ ಪರಿಣಮಿಸಲಿದೆ. ವಾರಾಂತ್ಯಕ್ಕೆ ನಿರೀಕ್ಷೆ ಮಾಡಿದಂತೆಯೇ ಶುಭ ಫಲಗಳು ಕಂಡುಬರುತ್ತದೆ. ಶುಭದಿನ 2. ಶಿವಕವಚ ಪಠಿಸಿರಿ.